**ಶ್ರೀ ಎಂ.ಆರ್ ವೆಂಕಟೇಶ್, ಅಧ್ಯಕ್ಷರು, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ, ಬೆಂಗಳೂರು ರವರ ಅಧ್ಯಕ್ಷತೆಯಲ್ಲಿ ದಿನಾಂಕ 30-1-2018 ರಂದು ಮಧ್ಯಾಹ್ನ 4.00 ಗಂಟೆಗೆ ಹಾಸನ ಜಿಲ್ಲೆ ಶ್ರವಣಬೆಳಗೊಳದಲ್ಲಿ ನಡೆದ ಸಭೆಯ ನಡವಳಿಗಳು**

***********

<u>ಹಾಜರಿದ್ದವರು:-</u>

1) ಶ್ರೀ ಎಂ.ಆರ್ ವೆಂಕಟೇಶ್, ಅಧ್ಯಕ್ಷರು, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ, ಬೆಂಗಳೂರು
2) ಶ್ರೀ ಗೋಕುಲನಾರಾಯಣ ಸ್ವಾಮಿಯವರು, ಸದಸ್ಯರು, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ, ಬೆಂಗಳೂರು
3) ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ, ಹಾಸನ
4) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಹಾಸನ
5) ಪೋಲೀಸ್ ವರಿಷ್ಠಾಧಿಕಾರಿಗಳು, ಪೋಲೀಸ್ ಇಲಾಖೆ, ಹಾಸನ
6) ವಿಶೇಷಾಧಿಕಾರಿಗಳು, ಮಹಾಮಸ್ತಕಾಭಿಷೇಕ, ಶ್ರವಣಬೆಳಗೊಳ, ಹಾಸನ
7) ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಸಿ.ಎಲ್, ಹಾಸನ
8) ಆಯುಕ್ತರು, ನಗರಸಭೆ, ಹಾಸನ
9) ತಹಶೀಲ್ದಾರ್, ಚ.ರಾ.ಪಟ್ಟಣ
10) ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಚ.ರಾ.ಪಟ್ಟಣ
11) ಹಿರಿಯ ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಹಾಸನ
12) ಜಿಲ್ಲಾ ಕಾರ್ಮಿಕ ಅಧಿಕಾರಿಗಳು, ಕಾರ್ಮಿಕ ಇಲಾಖೆ, ಹಾಸನ.
13) ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಹಾಸನ

ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಹಾಸನ ರವರು ಸಭೆಯಲ್ಲಿ ಹಾಜರಿದ್ದ ಎಲ್ಲರನ್ನೂ ಸ್ವಾಗತಿಸಿದರು.

ಶ್ರೀ ಎಂ.ಆರ್ ವೆಂಕಟೇಶ್, ಅಧ್ಯಕ್ಷರು, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ, ಬೆಂಗಳೂರು ರವರು ಮಾತನಾಡುತ್ತಾ ದಿನಾಂಕ 28-1-2018 ರಂದು ಹಿಂದು ಪತ್ರಿಕೆಯಲ್ಲಿ ಶ್ರವಣಬೆಳಗೊಳದಲ್ಲಿ ನಿರ್ಮಿಸಿರುವ ತ್ಯಾಗಿ ಉಪನಗರದಲ್ಲಿ ಮ್ಯಾನುಯಲ್ ಸ್ಕಾವೆಂಜರ್ ಆಕ್ಟ್‌ಗೆ ವಿರುದ್ಧವಾಗಿ ಮ್ಯಾನುಯಲ್ ಸ್ಕಾವೆಂಜಿಂಗ್ ಮಾಡಿಸುತ್ತಿರುವುದು ಪ್ರಕಟವಾಗಿದ್ದು, ಈ ಬಗ್ಗೆ ಆಯೋಗದ ಸದಸ್ಯರು ಮತ್ತು ಸಿಬ್ಬಂದಿಗಳು ಪರಿಶೀಲನೆ ಸಮಯದಲ್ಲಿ ಇನ್‌ಸ್ಯಾನಿಟರಿ ಲೆಟ್ರೀನ್‌ಗಳನ್ನು ಗುತ್ತಿಗೆ ನೌಕರರು ಸ್ವಚ್ಛ ಮಾಡುತ್ತಿರುವುದು ಕಂಡು ಬಂದಿರುತ್ತದೆ. ಸದರಿ ವಿಷಯಕ್ಕೆ ಸಂಬಂಧಿಸದಿಂತೆ ಎಲ್ಲಾ ಅಧಿಕಾರಿಗಳು ಮತ್ತು ಆಯೋಗವು ಒಳಗೊಂಡಂತೆ ಪರಿಶೀಲಿಸಲು ಭೇಟಿ ನೀಡಿದ ಸಂಧರ್ಭದಲ್ಲಿ, ತ್ಯಾಗಿ ನಗರ, ಶ್ರವಣಬೆಳಗೊಳದಲ್ಲಿ 170 ಇನ್‌ಸ್ಯಾನಿಟರಿ ಲೆಟ್ರಿನ್‌ಗಳನ್ನು ನಿರ್ಮಿಸಲಾಗಿದ್ದು, ಇನ್‌ಸ್ಯಾನಿಟರಿಯನ್ನು ಸ್ವಚ್ಛ ಮಾಡಲು ಯಾವುದೇ ವಿಧಾನ ಅಳವಡಿಸಿರುವುದಿಲ್ಲ. ಇವುಗಳಿಗೆ ಯಾವುದೇ ಪೈಪ್‌ಲೈನ್ ಹಾಗೂ ನೀರಿನ ವ್ಯವಸ್ಥೆ ಇರುವುದಿಲ್ಲ. 2 ಇಟ್ಟಿಗೆಗಳನ್ನು ಇಡಲಾಗಿದ್ದು, ಆ ಜಾಗದಲ್ಲಿ ಮಲಮೂತ್ರ ವಿಸರ್ಜನೆಯನ್ನು ಮಾಡಿ ಆ ಜಾಗಕ್ಕೆ ಮರಳನ್ನು ಹಾಕಿರುವುದು ಕಂಡು ಬಂದಿರುತ್ತದೆ. ಈ 170 ಶೌಚಾಲಯಗಳನ್ನು ಹೊರತುಪಡಿಸಿ ಬಾಕಿ ನಿರ್ಮಿಇಸಿರುವ 5000 ಶೌಚಾಲಯಗಳನ್ನು ಮ್ಯಾನುಯಲ್ ಸ್ಕಾವೆಂಜರ್ ಆಕ್ಟ್‌ಗಳ ಅನ್ವಯ ನಿರ್ಮಿಸಲಾಗಿದ್ದು, ಈ ಬಗ್ಗೆ ಆಯೋಗದಿಂದ ಯಾವುದೇ ಆಕ್ಷೇಪಣೆ ಇರುವುದಿಲ್ಲ ಎಂದು ತಿಳಿಸಿದರು.

ಜಿಲ್ಲಾಧಿಕಾರಿಗಳು ಮಾತನಾಡುತ್ತಾ ಶ್ರವಣಬೆಳಗೊಳ ಮಠದವರು ಮತ್ತು ಜೈನ ಸಮುದಾಯದವರ ಕೋರಿಕೆ ಮೇರೆಗೆ ಈ ರೀತಿ ಶೌಚಾಲಯಗಳನ್ನು ನಿರ್ಮಿಸಲಾಗಿರುತ್ತದೆ. ಮುನಿಗಳು ಉಪಯೋಗಿಸುವ ಶೌಚಾಲಯವನ್ನು ಮುನಿಗಳ ಸೇವೆಗೆ ಬಂದಿರುವ ಸ್ವಯಂ ಸೇವಕರು ಮಾಡುತ್ತಾರೆ ಎಂದು ಮಠದವರು ತಿಳಿಸಿರುತ್ತಾರೆ. ಹಾಗೂ ಮ್ಯಾನುಯಲ್ ಸ್ಕಾವೆಂಜರ್ ಆಕ್ಟ್ ಉಲ್ಲಂಘನೆ ಆಗಿರುವ ಬಗ್ಗೆ ಮಠದವರಿಗೆ ನೋಟೀಸ್ ನೀಡಿರುವುದಾಗಿ ತಿಳಿಸಿದರು. ವಿಶೇಷಾಧಿಕಾರಿಗಳು ಮಾತನಾಡುತ್ತಾ ನಾವು ಸಹ ಈ ಬಗ್ಗೆ ಹಲವಾರು ಬಾರಿ ಚರ್ಚಿಸಿರುತ್ತೇವೆ. ಶ್ರವಣಬೆಳಗೊಳ ಮಠದ ಸ್ವಾಮಿಜಿಯವರೊಂದಿಗೆ ಒಮ್ಮೆ ಚರ್ಚಿಸಲು ಅಧ್ಯಕ್ಷರಲ್ಲಿ ಮನವಿ ಮಾಡಿದಾಗ ಅಧ್ಯಕ್ಷರು ಸ್ವಾಮಿಜಿಯವರೊಂದಿಗೆ ಚರ್ಚೆ ಮಾಡುವುದಾಗಿ ತಿಳಿಸಿದರು. ಮತ್ತು ಸದರಿ ಶೌಚಾಲಯಗಳನ್ನು ಸ್ವಚ್ಛತಾ ಕಾರ್ಮಿಕರೇ ಸ್ವಚ್ಛಗೊಳಿಸುತ್ತಿರುವುದು ಕಂಡುಬಂದಿರುತ್ತದೆ ಎಂದು ತಿಳಿಸಿದರು ಅಲ್ಲದೇ, ಉಪನಗರದಲ್ಲಿ ಕೆಲಸ ಮಾಡುತ್ತಿರುವ 300 ಜನ ಸ್ವೀಪರ್ಸ್‌ಗಳಿಗೆ Minimun Wages Act ಪ್ರಕಾರ ಸಂಬಳವನ್ನು ನೀಡುತ್ತಿರುವುದಿಲ್ಲ. ಪ್ರತೀ ನೌಕರರಿಗೆ ದಿನಕ್ಕೆ 270 ರೂಗಳಂತೆ ವೇತನ ನೀಡಲಾಗುತ್ತಿರುತ್ತದೆ. ಸ್ವೀಪರ್ಸ್‌ಗಳಿಗೆ ಸುರಕ್ಷತಾ ಪರಿಕರಗಳನ್ನು ನೀಡಿರುವುದಿಲ್ಲ. ಆದ್ದರಿಂದ ಸಂಬಂಧಪಟ್ಟ ಗುತ್ತಿಗೆದಾರರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾವುದು ಎಂದು ತಿಳಿಸಿದರು. ಶ್ರವಣಬೆಳಗೊಳ ಮಹಾಮಸ್ತಕಾಭಿಷೇಕ ವಿಶ್ಲೇಷಾಧಿಕಾರಿಗಳು ಮಾತನಾಡುತ್ತಾ ಉಪನಗರಗಳ ಸ್ವಚ್ಚತಾ ಕಾಮಗಾರಿಗೆ ಹೊರರಾಜ್ಯದ ದುಬೆ ಎಂಬುವವರು ಟೆಂಡರ್ ಪಡೆದಿದ್ದು, ಕೆಲಸ ನಿರ್ವಹಣೆ ಮಾಡುತ್ತಿರುತ್ತಾರೆಂದು ತಿಳಿಸಿದರು.

ಸ್ವಚ್ಚತಾ ಸಿಬ್ಬಂದಿ ಗುತ್ತಿಗೆದಾರ ದುಬೆ ರವರು ಮಾತನಾಡುತ್ತಾ ಸ್ವಚ್ಚತಾ ಸಿಬ್ಬಂದಿಗಳಿಗೆ ಸುರಕ್ಷತಾ ಪರಿಕರಗಳನ್ನು ನೀಡಲಾಗುವುದು, ಹಾಗೂ ಕಾರ್ಮಿಕ ಇಲಾಖೆ ನಿಗಧಿ ಪಡಿಸಿರುವ ವೇತನ/ಇತರೆ ಸೌಲಭ್ಯ ನೀಡಲು ಒಪ್ಪಿಗೆ ಇರುವುದಾಗಿ ತಿಳಿಸಿದರು.

ಅಧ್ಯಕ್ಷರು ಮಾತನಾಡುತ್ತಾ ಸ್ವಚ್ಚತಾ ಸಿಬ್ಬಂದಿಗಳಿಗೆ Minimun Wages Act ಪ್ರಕಾರ ದಿನಕ್ಕೆ ರೂ.538 ರಂತೆ ವೇತನ ನೀಡಬೇಕು. ಕಡ್ಡಾಯವಾಗಿ ಸುರಕ್ಷತಾ ಪರಿಕರಗಳನ್ನು ಒದಗಿಸತಕ್ಕದ್ದು. ಮತ್ತು ಇನ್ ಸ್ಯಾನಿಟರಿ ಲೆಟ್ರೀನ್‌ನ್ನು ಸ್ಯಾನಿಟರಿಯಾಗಿ ಬದಲಾವಣೆ ಮಾಡಲು ಸೂಕ್ತ ಕ್ರಮ ವಹಿಸಲು ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳು ಮಾತನಾಡಿ ಆಯೋಗದ ನಿರ್ದೇಶನದಂತೆ ಒಮ್ಮೆ ಸ್ವಾಮೀಜಿರವರನ್ನು ಒಪ್ಪಿಸಿ ಇನ್‌ಸ್ಯಾನಿಟರಿ ಲೆಟ್ರೀನ್‌ಗಳನ್ನು ನಿರ್ಮೂಲನೆ ಮಾಡಲಾಗುವುದು ಮತ್ತು ಕಾರ್ಮಿಕ ಇಲಾಖೆಯು ನಿಗಧಿಪಡಿಸಿರುವಂತಹ ಕನಿಷ್ಟ ವೇತನವನ್ನು ಪಾವತಿಸಲಾಗುವುದು ಮತ್ತು ಎಲ್ಲಾ ಸುರಕ್ಷತಾ ಪರಿಕರಗಳನ್ನು ಕಡ್ಡಾಯವಾಗಿ ನೀಡಿ, ಸ್ವಚ್ಛಗೊಳಿಸಲಾಗುವುದೆಂದು ತಿಳಿಸಿದರು.

ಆಯೋಗದ ಅಧ್ಯಕ್ಷರು ಮತ್ತು ಸದಸ್ಯರು ಶ್ರವಣಬೆಳಗೊಳ ಮಠದ ಸ್ವಾಮಿಜಿಯವರೊಂದಿಗೆ ಚರ್ಚಿಸಲಾಗಿ ಇನ್‌ಸ್ಯಾನಿಟರಿ ಲೆಟ್ರೀನ್‌ನ್ನು ಕಡ್ಡಾಯವಾಗಿ ನಿರ್ಮೂಲನೆ ಮಾಡಬೇಕಾಗಿರುತ್ತದೆ. ಮತ್ತು ಎಂ.ಎಸ್.ಕಾಯ್ದೆ 2013 ರ ಪ್ರಕಾರ ಮಾನವ ಸಂಪನ್ಮೂಲದ ಮಾನವನ ಮಲ-ಮೂತ್ರವನ್ನು ಸಾಗಿಸುವುದಾಗಲೀ, ಸ್ವಚ್ಛಗೊಳಿಸುವುದಾಗಲೀ ಆಕ್ಟ್‌ನ ಪ್ರಕಾರ ನಿಷೇಧವಾಗಿರುತ್ತದೆ. ಅಲ್ಲದೇ ತಮ್ಮ ತ್ಯಾಗಿ ನಗರದಲ್ಲಿ ಶ್ರವಣಬೆಳಗೊಳದಲ್ಲಿ ಈ ಕೂಡಲೇ ಇನ್‌ಸ್ಯಾನಿಟರಿ ಲೆಟ್ರೀನ್‌ಗಳನ್ನು ನಿರ್ಮೂಲನೆ ಮಾಡಲು ಅವಕಾಶ ಮಾಡಿಕೊಡಬೇಕಾಗಿ ಸ್ವಾಮೀಜಿಯಲ್ಲಿ ಆಯೋಗವು ತಿಳಿಸಿದ ಸಮಯದಲ್ಲಿ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸ್ವಾಮೀಜಿರವರು ಕಾಲ ಕಾಲಕ್ಕೆ ಬದಲಾಗುತ್ತಿರುವ ಹಿನ್ನಲೆಯಲ್ಲಿ ಯಾವುದೇ ಕಾಯ್ದೆಯನ್ನು ಪಾಲನೆ ಮಾಡುವುದು ನಮ್ಮ ನಿಮ್ಮೆಲ್ಲರ ಕರ್ತವ್ಯವಾಗಿರುವುದರಿಂದ ಇನ್‌ಸ್ಯಾನಿಟರಿ ಲೆಟ್ರೀನ್‌ಗಳನ್ನು ನಿರ್ಮೂಲನೆ ಮಾಡಿಸಲಾಗುವುದೆಂದು ತಿಳಿಸಿದರು.

ಅಧ್ಯಕ್ಷರು ಮಾತನಾಡುತ್ತಾ, ಸ್ವಾಮೀಜಿರವರು ಒಪ್ಪಿರುವ ಹಿನ್ನಲೆಯಲ್ಲಿ ವಿಶೇಷಾಧಿಕಾರಿಗಳು, ಮಹಾಮಸ್ತಕಾಭೀಷೇಕ, ಶ್ರವಣಬೆಳಗೊಳ, ಹಾಸನ, ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆರವರಿಗೆ ಈ ಕೂಡಲೇ ಇ[illegible] ಸ್ಯಾನಿಟರಿ ಲೆಟ್ರೀನ್‌ಗಳನ್ನು ನಿರ್ಮೂಲನೆ ಮಾಡಿ ಆಯೋಗಕ್ಕೆ ವರದಿ ನೀಡಲು ತಿಳಿಸಿದರು.

**(ಕ್ರಮ: ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ. ವಿಶೇಷಾಧಿಕಾರಿಗಳು, ಮಹಾಮಸ್ತಕಾಭೀಷೇಕ, ಶ್ರವಣಬೆಳಗೊಳ, ಹಾಸನ. ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ಹಾಸನ.)**

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**(ಎಂ.ಆರ್.ವೆಂಕಟೇಶ್)**
**ಅಧ್ಯಕ್ಷರು,**
**ಕರ್ನಾಟಕ ರಾಜ್ಯ ಸಫಾಯಿ**
**ಕರ್ಮಚಾರಿಗಳ ಆಯೋಗ,**
**ಬೆಂಗಳೂರು.**

ಪ್ರತಿಯನ್ನು:

1. ಅಧ್ಯಕ್ಷರು, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗರವರ ಆಪ್ತ ಕಾರ್ಯದರ್ಶಿಗಳ ಸೂಕ್ತ ಮಾಹಿತಿಗಾಗಿ.
2. ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ, ಹಾಸನ
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಹಾಸನ
4. ಪೋಲೀಸ್ ವರಿಷ್ಟಾಧಿಕಾರಿಗಳು, ಪೋಲೀಸ್ ಇಲಾಖೆ, ಹಾಸನ
5. ವಿಶೇಷಾಧಿಕಾರಿಗಳು, ಮಹಾಮಸ್ತಕಾಭೀಷೇಕ, ಶ್ರವಣಬೆಳಗೊಳ, ಹಾಸನ
6. ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಸಿ.ಎಲ್, ಹಾಸನ
7. ಜಿಲ್ಲಾ ಕಾರ್ಮಿಕ ಅಧಿಕಾರಿಗಳು, ಕಾರ್ಮಿಕ ಇಲಾಖೆ, ಹಾಸನ.
8. ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಹಾಸನ
9. ಕಛೇರಿ ಪ್ರತಿ.

**ಕಾರ್ಯದರ್ಶಿಗಳು,**
**ಕರ್ನಾಟಕ ರಾಜ್ಯ ಸಫಾಯಿ**
**ಕರ್ಮಚಾರಿಗಳ ಆಯೋಗ,**
**ಬೆಂಗಳೂರು.**